

ಮಾತನ್ನು ಹುಡುಕುತ್ತಿದ್ದರು. ಇಬ್ಬರಿಗೂ ರೂಮಿನ ಏಕಾಂತ ಸೇರಿಕೊಳ್ಳುವ ಅವಸರವಿತ್ತು. 'ಗುಡ್ ನೈಟ್' ವಿನಿಮಯದೊಂದಿಗೆ ಬಾಗಿಲು ಮುಚ್ಚಿದರು. ರಾವ್ ಮಲಗಿದ ಸ್ಪಂಜಿನ ಬೆಡ್ ಅರ್ಧ ದೇಹ ಹುಗಿದುಹೋಗುವಷ್ಟು ಮೆತ್ತಗಿತ್ತು. ಉಣ್ಣೆ ರಗ್ಗಿನ ಬೆಚ್ಚಗಿನ ಹೊದಿಕೆಯ ಡಬಲ್ ಬೆಡ್ ಮೇಲೆ ಸುಬ್ರೊ ಒಂಟಿ ಮಲಗುತ್ತಾನಲ್ಲ ಎಂದು ಖೇದವೆನಿಸಿತು. ಹದಿನೆಂಟಕ್ಕೇ ಜೊತೆಯಾಗುವ ಈ ದೇಶದಲ್ಲಿ ಸುಬ್ರೊಗೆ ನೀಲಿ ಕಣ್ಣಿನ ಚೆಲುವಾದ ಸಂಗಾತಿ ಅರ್ಧಾಂಗಿಯಾಗಿ ಬಂದು ಮನೆ ತುಂಬಬೇಕಿತ್ತು. ಮೂರು ಅಂತಸ್ತಿನ ಮನೆ ಅಂತಹ ಚೆಲುವೆಯ ಪ್ರವೇಶವನ್ನು ಕಾಯುತ್ತಿದೆ. ಬಳಸದೆ ತಂದಿಟ್ಟ ಅಡುಗೆ ಸಾಮಾನುಗಳು ಅವಧಿ ಮೀರಿ ತ್ಯಾಜ್ಯ ವಸ್ತುಗಳಾಗಿವೆ. ವಾರ್ಡ್ರೋಬ್ ತುಂಬ ಹ್ಯಾಂಗರಿಗೆ ರಾಶಿ ಡ್ರೆಸ್ಸು ಜೋತು ಬಿದ್ದಿವೆ. 'ಇದು ನಿನಗೆ ಬಾಳ ಚಲೊ ಒಪ್ಪತದ' ಎಂದು ಹೇಳುವ ಜೀವವಿಲ್ಲದೆ ಅವು ಸೂತಕದ ಮನೆಯ ವಸ್ತ್ರಗಳಾಗಿವೆ. ತಂಗಳು ಮುಕ್ಕಿ, ಅವಸರದಲ್ಲಿ ಆಫೀಸಿಗೆ ಕಾರು ಓಡಿಸಿ, ತಾನೂ ವಾಹನದ ಬಿಡಿ ಭಾಗವಾಗಿ ಡ್ಯೂಟಿ ಮುಗಿಸಿ ನಿರ್ಜನ ಮನೆಗೆ ದಣಿದು ಮರಳುವ ಯಾಂತ್ರಿಕ ಕಾಯಕದಿಂದ ಅವನು ಲಡ್ಡಾಗಿದ್ದಾನೆ. ಆಗೆಲ್ಲ ಅವನಿಗೆ ಧಾರವಾಡ ಖಾನಾವಳಿಯ ಬಿಸಿ ರೊಟ್ಟಿಯ ಕಂಪು, ಮಾವಿನ ಮರಗಳ ಕಂಪೌಂಡ್ ಒಳಗೆಲ್ಲೊ ಅವಿತು ಹಾಡುವ ಕೋಗಿಲೆ, ಕೊಡೆ ಬೇಡದ ಹೊಂಬಿಸಿಲ ತುಂತುರು ಮಳೆ ನೆನಪಾಗಿ ಊರಿಗೆ ಬರುವ ಆಸೆಯಾಗುತ್ತದೆ. ನಿತ್ಯ ನೂತನವಾಗಿ ಬದುಕಲು ಕಲ್ಯಾಣಿಯಂತ ಸಹಜೀವದ ಸಹವಾಸಕ್ಕೆ ಹೃದಯ ಹಂಬಲಿಸಿ ಮಂಕಾಗಿದೆ. ಈ ವೀಕೆಂಡ್‌ನ್ನು ಯಾವ ಸರೋವರದ ಮಡಿಲಲ್ಲಿ ಕಳೆಯುವುದು, ಹೊಸ ರುಚಿಗೆ ಯಾವ ಇಂಡಿಯನ್ ರೆಸ್ಟೊರೆಂಟ್‌ನ್ನು ಆಯ್ಕೆ ಮಾಡುವುದು, ಶಾಪಿಂಗ್ ಯಾವ ಮಾಲಲ್ಲಿ ಮಾಡಿದರೆ ಚಲೊ ಇತ್ಯಾದಿ ದೈನಿಕಕ್ಕೊಂದು ಕನಸಿನ ನಕಾಶೆ ಬಿಡಿಸಿ ಉತ್ಸವವನ್ನು ಉತ್ತೇಜಿಸುವ ಆಪ್ತ ಒಡನಾಡಿಯಿಲ್ಲದೆ ಸುಬ್ರೊ ಶೃತಿ ಮಾಡಿ ಮೀಟದೆ ಬಿಟ್ಟ ತಂಬೂರಿ ತಂತಿಯಂತಾಗಿದ್ದಾನೆ. ಅವಳ ಉಚ್ಛ್ವಾಸಕ್ಕೆ ಅವನ ನಿಃಶ್ವಾಸವಿಲ್ಲ. ಅವನ ಸ್ನಾನದ ಶ್ಯಾಂಪೂ ಕಂಪನ್ನು ಹೀರುವ ಮೂಗುತಿಯ ನಾಸಿಕವಿಲ್ಲ. ಅಪ್ಪುಗೆಗೆ ಚಾಚಿದ ಹಸ್ತಗಳ ಒಳಾವರಣದ ತೆರವನ್ನು ಭರ್ತಿ ಮಾಡುವ ಹೆಣ್ಣಾಕೃತಿಯಿಲ್ಲ. ಅವನ ನೋಟದೊಳಗೆ ಪ್ರೀತಿಯ ಬಿಂಬವಾಗಿ ಪೂಜಿಸಿಕೊಳ್ಳುವ ಅವಳಿಲ್ಲ. ತುಟಿಯಿಂದ ಪುಟಿದ ಸ್ವಗತ ಸುತ್ತಾಡಿ ಮಳ್ಳು ದುಂಬಿಯಂತೆ ಅವನ ಕಿವಿಗೇ ವಾಪಸ್ಸಾಗುತ್ತದೆ. ಮಂದಹಾಸವನ್ನು ಮುತ್ತಿಕ್ಕುವ ಮುದ್ದು ತುಟಿಯಿಲ್ಲ. ಮನೆ ಬೆಲ್ ಕರೆದಾಗ ಬಾಗಿಲು ತೆರೆದು ಸ್ವಾಗತಿಸುವ ಮೋಹಕ ನಗುವಿಲ್ಲ. ಹೊರಟು ಹತ್ತು ಹೆಜ್ಜೆ ಹಾಕಿ ತಿರುಗಿ ನೋಡಿದಾಗ ವಿರಹದಿಂದ ವಿದಾಯ ಹೇಳುವ ಕೋಮಲ ಬೆರಳುಗಳಿಲ್ಲ. ಇಲ್ಲಗಳ ಸಂತೆಯಲ್ಲಿ ಸುಬ್ರೊ ವ್ಯಾಪಾರ ಮಾಡಲಾರದ ದರಿದ್ರ ಗಿರಾಕಿ. ಈಗ ಜಾಗೃತವಾಗುತ್ತಿರುವ ಪ್ರತಿಮೆಗಳು ಒಂದು ಕಾಲದ ಕಲ್ಯಾಣಿಯ ಸಾಹಚರ್ಯದಲ್ಲಿ ತನ್ನೊಳಗೆ ಸುಪ್ತವಾಗಿ ಜಿನುಗುತ್ತಿದ್ದವೆ ಎಂದು ರಾವ್ ವಿಹ್ವಲಗೊಂಡರು.

* * *

ಗಾಢ ಕತ್ತಲೆಯ ನೀರವ ರಾತ್ರಿ ನಿದ್ದೆ ಬಾರದ ಸುಬ್ರೊಗೆ ಗದ್ದಲದಂತೆ ಕೇಳಿಸುತ್ತಿತ್ತು. ಅಪ್ಪನ ಒಂಟಿತನ ನೆನೆದು ಮೃದು ಮನಸು ಬಿಕ್ಕಿ ಅಳುವಷ್ಟು ದುರ್ಬಲವಾಗುತ್ತದೆ. ಅವ್ವ ತೀರಿದಾಗ ಮನೆಗೆ ಹೋಗಿದ್ದೆ. ದೊಡ್ಡ ಹಾಲಿನಲ್ಲಿ ಅಪ್ಪ ಒಬ್ಬರೇ ಕೂತಿದ್ದರು. ಸೂತಕದ ನೋವನ್ನು ಅಪ್ಪನ ಮಡಿಲಲ್ಲಿಟ್ಟು ಬಂಧುಗಳು ಹೊರಟು ಹೋದ ಮುಸ್ಸಂಜೆಯ ನಶ್ವರ ಬೇಸರದಲ್ಲಿ ತಾನು ತಳಮಳಿಸಿದೆ. ಅಪ್ಪನಿಂದ ಒದ್ದೆಯಾದ ಕಣ್ಣು